ಅಥವಾ ಇಲ್ಲವೇ ? ಮೂರನೆಯದು ನಾನು ಈಗಾಗಲೇ ಈ ಪ್ರಶ್ನೆಯನ್ನು ಮೂರು ಜನ ಮಂತ್ರಿಯವರ ಹತ್ತಿರ ಕೇಳಿದ್ದೇನೆ. ಇನ್ನು ನಾಲ್ಕನೆಯ ಮಂತ್ರಿಯವರಿಗೆ ನಾನು ಪ್ರಶ್ನೆಯನ್ನು ಕೇಳುವುದು ಬೇಡವೆನ್ನುವ ಆಶ್ವಾಸನೆಯನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:– ನಾನು ಇದರ ಬಗ್ಗೆ ವಿಚಾರ ಮಾಡಿ, ಕಾರ್ಯಕ್ರಮವನ್ನು ಕೈಗೊಳ್ಳುತ್ತೇನೆ.

ಡಾ।। ಹೆಚ್. ನರಸಿಂಹಯ್ಯ ಸಮಿತಿಯ ವರದಿಯನ್ನು ಕಾರ್ಯಗತಗೊಳಿಸುವುದು.

3 10. ಶ್ರೀ ಎಸ್. ಶಫಿ ಅಹಮದ್ (ತುಮಕೂರು):– ಮಾನ್ಯ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ವಿಶ್ವವಿದ್ಯಾನಿಲಯದ ವಿಭಾಗಗಳನ್ನು ತುಮಕೂರು ಮತ್ತು ಕೋಲಾರದಲ್ಲಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಶ್ರೀ ನರಸಿಂಹಯ್ಯ ಸಮಿತಿ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ ತೆಗೆದುಕೊಂಡ ಕ್ರಮ ಏನು ? ಯಾವ ವಿಷಯದಲ್ಲಿ ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸಲಾಗುವುದು ಮತ್ತು ಅದರ ಆರ್ಥಿಕ ವೆಚ್ಚವೇನು ?

ಆ) ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಎಷ್ಟು ಉಪನ್ಯಾಸಕರುಗಳ ಹುದ್ದೆಗಳು ಖಾಲಿ ಇವೆ ಹಾಗೂ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ?

ಶ್ರೀ ಎಸ್.ಎಂ. ಯಾಹ್ಯಾ (ಶಿಕ್ಷಣ ಮತ್ತು ವಕ್ಫ್ ಸಚಿವರು):–

ಅ) ತುಮಕೂರು ಮತ್ತು ಕೋಲಾರದಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 1. ಬೆಂಗಳೂರು ವಿಶ್ವವಿದ್ಯಾನಿಲಯ – 61
2. ಮೈಸೂರು ವಿಶ್ವವಿದ್ಯಾನಿಲಯ – 65
3. ಕರ್ನಾಟಕ ವಿಶ್ವವಿದ್ಯಾನಿಲಯ – 55
4. ಗುಲ್ಬರ್ಗಾ ವಿಶ್ವವಿದ್ಯಾನಿಲಯ – 29
5. ಮಂಗಳೂರು ವಿಶ್ವವಿದ್ಯಾನಿಲಯ – 11
6. ಕುವೆಂಪು ವಿಶ್ವವಿದ್ಯಾನಿಲಯ – 35

ನೇರ ನೇಮಕಾತಿ ಮುಖಾಂತರ ಈ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.

ಶ್ರೀ ಎ.ಎಂ. ಹಿಂಡಸಗೇರಿ (ಮಾನ್ಯ ಶ್ರೀ ಶಫಿ ಅಹಮ್ಮದ್ ಅವರ ಪರವಾಗಿ):– ಮಾನ್ಯ ಉಪಾಧ್ಯಕ್ಷೀಣಿಯವರೆ, ಈ ಉತ್ತರದಲ್ಲಿ ತುಮಕೂರು ಮತ್ತು ಕೋಲಾರದಲ್ಲಿ ಪಿ.ಜಿ. ಸೆಂಟರ್ ಅನ್ನು ಎಸ್ಟಾಬ್ಲಿಶ್ ಮಾಡಲು ಕನ್ಸಿಡರ್ ಮಾಡುತ್ತೇವೆಂದು ಹೇಳಿದ್ದಾರೆ. ಎಷ್ಟು ಸಮಯದಲ್ಲಿ ಕೋಲಾರ ಮತ್ತು ತುಮಕೂರಿನಲ್ಲಿ ನಮಗೆ ಆ ಸಂಸ್ಥೆಯನ್ನು ಎಸ್ಟಾಬ್ಲಿಶ್ ಮಾಡಿಕೊಡುತ್ತೀರೆಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ:– ಶ್ರೀ ನರಸಿಂಹಯ್ಯ ಕಮಿಟಿಯವರು ಯಾವುದೊಂದು ಪ್ರಶ್ನೆಗೆ ಹೋಗಿದ್ದರೋ ಅದು ಎಸ್ಟಾಬ್ಲಿಶ್‌ಮೆಂಟ್ ಆಫ್ ಪಿ.ಜಿ. ಸೆಂಟರ್ಸ್ ಅಲ್ಲ, ಸಬ್ ಸೆಂಟರ್ಸ್ ಮಾಡಬೇಕೋ ಇಲ್ಲವೋ ಎನ್ನುವಂತಹ ಆ ಪಾಯಿಂಟ್ ಮೇಲೆ ಹೋಗಿದ್ದುದು. ಸಬ್ ಸೆಂಟರ್ಸ್ ಎಂದು ಹೇಳಿದರೆ ಅಡ್ಮಿನಿಸ್ಟ್ರೇಟಿವ್ ಡಿ–ಸೆಂಟ್ರಲೈಜೇಷನ್. ಪಿ.ಜಿ. ಸೆಂಟರ್ ಅಂದರೆ ಪಾಠ

ಕೊಡುವಂತಹ ಸಂಸ್ಥೆಗಳು. ಅದಕ್ಕಾಗಿ ಈ ವಿಚಾರದಲ್ಲಿ ಬರೀ ಸಬ್ ಸೆಂಟರ್ ಮಾಡಲಿಕ್ಕೆ ಮೇನ್ ಕೊಶ್ಚನ್ ಯಾವುದು ಇದೆ ಅದು ಡಾ: ನರಸಿಂಹಯ್ಯನವರ ಕಮಿಟಿಯ ರಿಪೋರ್ಟ್ ಪ್ರಕಾರ ಇದೆ. ಇಲ್ಲಿ ಪಿ.ಜಿ. ಸೆಂಟರ್ ವಿಚಾರ ಬರುವುದಿಲ್ಲ.

ರಾಜ್ಯದಲ್ಲಿರುವ ತಾಂತ್ರಿಕ ಮಹಾವಿದ್ಯಾಲಯಗಳ ಸಂಖ್ಯೆ

461. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):– ಮಾನ್ಯ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1991 ಮತ್ತು 1992ರಲ್ಲಿ ಎಷ್ಟು ಹೊಸ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ ?

ಆ) ಇಂಜಿನಿಯರಿಂಗ್ ಕಾಲೇಜುಗಳ ಮಂಜೂರಾತಿಗೆ ನೀಡುವ ಪ್ರಸ್ತಾವನೆಗೆ ಸಚಿವ ಸಂಪುಟದ ಒಪ್ಪಿಗೆ ದೊರೆತಿದೆಯೇ ?

ಇ) ಹಾಗಿದ್ದಲ್ಲಿ, ಅದಕ್ಕೆ ಯಾವಾಗ ಒಪ್ಪಿಗೆ ಕೊಡಲಾಯಿತು ?

ಈ) ಸಚಿವ ಸಂಪುಟ ಹೊಸ ಇಂಜಿನಿಯರಿಂಗ್ ಕಾಲೇಜುಗಳ ಮಂಜೂರಾತಿ ಕೊಡುವ ಪ್ರಸ್ತಾವನೆಗಳನ್ನು ಕುರಿತು ಚರ್ಚಿಸುವ ನಡೆವಳಿಯನ್ನು ಸ್ಥಿರೀಕರಿಸಿದೆಯೇ ?

ಉ) ಹಾಗಿದ್ದಲ್ಲಿ, ಅದನ್ನು ಯಾವಾಗ ಸ್ಥಿರೀಕರಿಸಲಾಯಿತು ?

ಊ) ಹೊಸ ಇಂಜಿನಿಯರಿಂಗ್ ಕಾಲೇಜುಗಳ ಮಂಜೂರಾತಿ ಕೊಡಲು ಎ ಐ ಸಿ ಟಿ ಇ ಯ ಒಪ್ಪಿಗೆ ಪಡೆಯಲಾಗಿದೆಯೇ ?

ಶ್ರೀ ಎಸ್.ಎಂ. ಯಾಹ್ಯಾ (ಶಿಕ್ಷಣ ಮತ್ತು ವಕ್ಫ್ ಸಚಿವರು):–

ಅ) 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 53ನೇ ಪ್ರಕರಣದ (5)ನೇ ಉಪ ಪ್ರಕರಣದಲ್ಲಿ ನಿಹಿತವಾದ ಅಧಿಕಾರಗಳನ್ನು ಚಲಾಯಿಸಿ ಕೆಲವು ಸಂಸ್ಥೆಗಳು 1992–93ನೇ ಸಾಲಿಗೆ ಕೆಲವು ಷರತ್ತುಗಳನ್ನು ಪೂರೈಸುವ ನಿಬಂಧನೆಗಳಿಗೊಳಪಟ್ಟು 9 ಹೊಸ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲು ಸಂಯೋಜನೆ ನೀಡುವಂತೆ ಸರ್ಕಾರ ಶಿಫಾರಸ್ಸು ಮಾಡಿತ್ತು. ಆದರೆ ಈ ಆದೇಶಗಳನ್ನು ಅನಂತರ ತಾರೀಖು 28–10–92 ರಂದು ಹಿಂತೆಗೆದುಕೊಳ್ಳಲಾಯಿತು.

ಆ) ಮತ್ತು ಇ) ಹೌದು. ತಾರೀಖು 20–8–92ರಂದು ಜರುಗಿದ ಸಂಪುಟದ ಸಭೆಯಲ್ಲಿ ಕ್ರಮಾಂಕ: ಸಿ.568:92ರ ತೀರ್ಮಾನದಲ್ಲಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವೃತ್ತಿಪರ ಕಾಲೇಜುಗಳನ್ನು ಅವಶ್ಯಕತೆಗನುಗುಣವಾಗಿ ಮತ್ತು ಶ್ರೇಷ್ಠ ಸಂಸ್ಥೆಗಳನ್ನು ನಡೆಸುವ ಅರ್ಹತೆ ಹೊಂದಿರುವ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ಮಂಜೂರು ಮಾಡಲು ಮುಖ್ಯಮಂತ್ರಿಗಳಿಗೆ ಅಧಿಕಾರ ನೀಡಲಾಗಿತ್ತು.

ಈ) ಮತ್ತು ಉ) ಹೌದು. ತಾರೀಖು 20–8–92 ಸಂಖ್ಯೆ: ಸಿ. 568:92ರ ತೀರ್ಮಾನವನ್ನು ತಾರೀಖು 1–9–92ರಂದು ಜರುಗಿದ ಸಂಪುಟದ ಸಭೆಯಲ್ಲಿ ಸಂಖ್ಯೆ: ಡಿಸಿಎ (ಸಿ) 96:92ರ ವಿಷಯದಲ್ಲಿ ಸ್ಥಿರೀಕರಿಸಲಾಗಿತ್ತು.

ಊ) ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 9 ಇಂಜಿನಿಯರಿಂಗ್ ಕಾಲೇಜುಗಳಿಗೆ 20–8–92ರಂದು ಮಂಜೂರು ಮಾಡಿದ್ದೇವೆಂದು